ಪರಿಮಳ ಜಬ್ಬರನ ಮೂಗಿಗೆ ಬಡಿದಿತ್ತು.

ಆ ದಿನ ಅರವಿಂದ ಎಂದಿನಂತೆ ಅಂಡರ್‌ಪಾಸಿನ ಕತ್ತಲೊಳಗಿನಿಂದ ನಡೆಯುತ್ತಾ ಬಂದನಾದರೂ ಮುಖದಲ್ಲಿ ಎಂದಿನ ಸುಖದ ಸುಸ್ತಿರಲಿಲ್ಲ. ರಾತ್ರಿ ಬೆಂಗಳೂರಿಂದ ಊರಿಗೆ ಹೋಗುವಾಗ, ಮಾರನೇ ದಿನದ ಹಗಲನ್ನು ಜಬ್ಬಾರನ ಮನೆಯಲ್ಲಿ ಕಳೆಯುವಾಗ, ರಾತ್ರಿ ಮತ್ತೆ ಬೆಂಗಳೂರಿಗೆ ಹೊರಡುವಾಗ.. ಎಲ್ಲ ಸಮಯದಲ್ಲೂ ಲವಲವಿಕೆಯಿಂದಲೇ ಇದ್ದ. ಆದರೆ ತೀರಾ ಹೊರಡುವ ಮುನ್ನ ಮಾತ್ರ ಐನೂರರ ದೊಡ್ಡ ಕಟ್ಟೊಂದನ್ನು ತೆಗೆದು, 'ಇಟ್ಕೊಂಡಿರಿ ಭಾಬೀ, ನಾ ಕೇಳಿದಾಗ ಕೊಡಿ' ಎಂದು ಬಲವಂತವಾಗಿ ಖತೀಜಾಳ ಕೈಗಿಟ್ಟು ಅವಳ ಕಾಲಿಗೆ ನಮಸ್ಕರಿಸಿದ್ದ. ಪರಮ ಒರಟನಾದ ಅವನ ಈ ಹಠಾತ್ ಹರ್ಕತ್ತುಗಳ ಅರ್ಥವೇನೆಂದು ಗೊತ್ತಾಗದ ಖತೀಜಾ ಹಾಗೂ ಜಬ್ಬರ್ ಮುಖ ಮುಖ ನೋಡಿಕೊಂಡಿದ್ದರು. ತೀರಾ ಹೊರಡುವ ಮುನ್ನ ಆಸೀಫನನ್ನೊಮ್ಮೆ ಮುದ್ದಿಸಿದ್ದ. ಅಷ್ಟೇ.. ಅಲ್ಲಿಂದ ಮುಂದೆ ಬೆಂಗಳೂರು ತಲುಪುವ ತನಕ ಅವನು ಒಂದೇ ಒಂದೂ ಮಾತಾಡಿರಲಿಲ್ಲ. ಬೆಳಿಗ್ಗೆ ಕಲಾಸೀಪಾಳ್ಯ ತಲುಪಿದ ಮೇಲೆ ಲಗುಬಗೆಯಲ್ಲಿ ಇಳಿದು ಹೋಗಿ ಅದೆಲ್ಲಿಂದಲೋ ಎರಡು ಫುಲ್ ಪ್ಲೇಟ್ ಭರ್ಜರಿ ಬಿರಿಯಾನಿ ತಂದಿದ್ದ. ಒತ್ತಾಯ ಮಾಡಿ ಜಬ್ಬರನಿಗೆ ತನ್ನ ಪ್ಲೇಟಿನದ್ದನ್ನೂ ತಿನ್ನಿಸಿದ್ದ. ಅಷ್ಟೇ.. ಬಿರಿಯಾನಿ ತಿಂದ ತೇಗು ಹಾಗೂ ಅರ್ಧ ಗಂಟೆಗೆಲ್ಲ ತಬ್ಬಿಕೊಂಡ ಗಾಢ ನಿದ್ರೆ.. ಇವೆರಡೇ ಜಬ್ಬರನಿಗೆ ನೆನಪಿದ್ದದ್ದು. ಅದಾದರೂ ಎಂಥಾ ನಿದ್ರೆ? ಸತ್ತೇ ಹೋದಷ್ಟು ಆಳವಾದ ನಿದ್ರೆ! ಕೊನೆಗೆ ಮಧ್ಯಾಹ್ನದ ಹೊತ್ತಿಗೆ ಯಾರೋ ಬಡಿದು ಎಬ್ಬಿಸಿದಾಗಲೇ ಅವನಿಗೆ ಎಚ್ಚರಾಗಿದ್ದು. ಎದ್ದು ನೋಡಿದರೆ ಬಸ್ಸಿನ ತುಂಬಾ ಜನ ಮುತ್ತಿಕೊಂಡಿದ್ದರು. ಜಬ್ಬರ್ ಎಲ್ಲರನ್ನೂ ಸರಿಸುತ್ತಾ ಹಿಂದೆ ಹೋಗಿ ನೋಡಿದ.

ಅಲ್ಲಿ ಅರವಿಂದನ ಶವ ನೇತಾಡುತ್ತಿತ್ತು.

***

ಧಿಗ್ಗನೆದ್ದು ಕುಳಿತ ಜಬ್ಬರ್. ಮುಖವೆಲ್ಲ ಬೆವರಿತ್ತು. ಎದೆ ಬಡಿತ ಜೋರಾಗಿತ್ತು. ಮುಖ ಒರೆಸಿಕೊಳ್ಳಲು ಕೈಯೆತ್ತಿದವನು ಥಟ್ಟನೆ

